**ಅಭಿನಂದನೆ....**
ಮಾಲೂರು ಪಟ್ಟಣದ ಗಾಂಧಿವೃತ್ತದ ಶ್ರೀ ಶಿರಡಿ ಸಾಯಿ ಬಾಬಾ ದೇಗುಲದಲ್ಲಿ ಕರವೇ ಪ್ರವೀಣ್‌ಕುಮಾರ್ ಶೆಟ್ಟಿ ಬಣದ ತಾಲೂಕು ಅಧ್ಯಕ್ಷ ಶಿವಾರ ನಾರಾಯಣಸ್ವಾಮಿ ನೇತೃತ್ವದಲ್ಲಿ ದೇವಾಲಯ ಕಾರ್ಯದರ್ಶಿ ಎಸ್. ಆರ್.ಶ್ರೀನಿವಾಸ್ ರೆಡ್ಡಿ ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

**ಶರಣರ ಜಯಂತಿ....**
ತುಮಕೂರು: ಜಿಲ್ಲಾಡಳಿತ ಹಾಗೂ ಕನ್ನಡ ಸಂಸ್ಕೃತಿ ಸಹಯೋಗದೊಂದಿಗೆ ನಗರದ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಗುರುವಾರ ಕಾಯಕ ಶರಣರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ತುಮಕೂರು ಉಪವಿಭಾಗಧಿಕಾರಿ ಅಜಯ್, ತಹಸೀಲ್ದಾರ್ ಮೋಹನ್ ಕಾಯಕ ಶರಣರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಮುಖಂಡ ನರಸಿಂಹರಾಜು, ಕನ್ನಡ ಸಂಸ್ಕೃತಿ ಇಲಾಖೆ ಸಿಬ್ಬಂದಿಗಳಾದ ಸುರೇಶ್‌ಕುಮಾರ್, ರಾಜೇಗೌಡ, ರಮೇಶ್, ದರ್ಶನ್, ಮೇಘನಾ, ಭಾಗ್ಯಮ್ಮ, ಈರಮ್ಮ, ವೀರಭದ್ರಪ್ಪ, ಕಲಾವಿದರಾದ ಶಿವಕುಮಾರ್ ಸೇರಿದಂತೆ ಇತರರಿದ್ದರು.



## ವಿದ್ಯಾರ್ಥಿಗಳಿಗೆ ಟ್ಯುಟೋಪಿಯಾ ಲರ್ನಿಂಗ್ ಆ್ಯಪ್ ಬಿಡುಗಡೆ

**ಬೆಂಗಳೂರು:** ಹೊಸ ಪೀಳಿಗೆಯ ಆನ್‌ಲೈನ್ ಲರ್ನಿಂಗ್ ಆ್ಯಪ್ ಆಗಿರುವ ಟ್ಯುಟೋಪಿಯಾಲರ್ನಿಂಗ್ ಆ್ಯಪ್ ಪಶ್ಚಿಮ ಬಂಗಾಳದ 8, 9 ಮತ್ತು 10ನೇ ತರಗತಿಗಳಿಗೆಂದೇ ವಿನ್ಯಾಸಗೊಳಿಸಲಾಗಿರುವ ಲರ್ನಿಂಗ್ ಆ್ಯಪ್ ಅನ್ನು ಇಂದು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಿಕ್ಷಣ ತಜ್ಞರ ಸಮ್ಮುಖದಲ್ಲಿ ಅನಾವರಣಗೊಳಿಸಲಾಯಿತು.

ಈ ಟ್ಯುಟೋಪಿಯಾ ಲರ್ನಿಂಗ್ ಆ್ಯಪ್ ಪಶ್ಚಿಮ ಬಂಗಾಳದ ವಿದ್ಯಾರ್ಥಿಗಳಿಗೆಂದೇ ವಿನ್ಯಾಸಗೊಳಿಸಿರುವ ಮೊದಲ ಆನ್‌ಲೈನ್ ಲರ್ನಿಂಗ್ ಆ್ಯಪ್ ಆಗಿದೆ ಮತ್ತು ಇದು ಸುಲಭ ದರದಲ್ಲಿ ಲಭ್ಯವಾಗುವ ಆ್ಯಪ್ ಆಗಿದೆ. ಪ್ರಸ್ತುತ ಶಿಕ್ಷಕರ ನೀಡಲಾಗುತ್ತಿರುವ ಸಂಬಳಕ್ಕಿಂತ ಕಡಿಮೆ ದರದಲ್ಲಿ ಲಭ್ಯವಾಗುವ ಆ್ಯಪ್ ಇದಾಗಿದೆ.

ಟ್ಯುಟೋಪಿಯಾ ಲರ್ನಿಂಗ್ ಆ್ಯಪ್ ಅನ್ನು ಗೂಗಲ್ ಪ್ಲೇಸ್ಟೋರ್ ಮತ್ತು ಆ್ಯಪಲ್ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಈ ಆ್ಯಪ್ ಅನ್ನು ಸುಬ್ರತಾ ರಾಯ್ ಅವರು ತಮ್ಮ ಪಾಲುದಾರರಾದ ಗೌರವ್ ದುಗಾರ್ ಮತ್ತು ಅನುರಾಗ್ ಚಿರಿಮಾರ್ ಅವರೊಂದಿಗೆ ಸೇರಿ ವಿನ್ಯಾಸಗೊಳಿಸಿದ್ದಾರೆ.

ಟ್ಯುಟೋಪಿಯಾ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಸುಬ್ರತಾ ರಾಯ್ ಅವರು ಮಾತನಾಡಿ, ಈ ಟ್ಯುಟೋಪಿಯಾ ಲರ್ನಿಂಗ್ ಆಪ್ ಮೂಲಕ ನಾವು ಹೊಸ ಪೀಳಿಗೆಯ ಲರ್ನಿಂಗ್ ಟೂಲ್ ಅನ್ನು ಬೆಂಗಾಲಿ ಶಾಲಾ ಮಕ್ಕಳಿಗೆ ನೀಡುತ್ತಿದ್ದೇವೆ. ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ನಾವು ನೂರಾರು ಮಾನವ ಗಂಟೆಗಳನ್ನು ವ್ಯಯಿಸಿದ್ದೇವೆ. ಈ ಸಂದರ್ಭದಲ್ಲಿ ನಾವು ವಿದ್ಯಾರ್ಥಿಗಳ ಗುರಿಗಳ ಮ್ಯಾಪಿಂಗ್, ಅವರ ಸಾಮರ್ಥ್ಯ, ದೌರ್ಬಲ್ಯ ಮತ್ತು ಆಸಕ್ತಿಗಳ ಬಗ್ಗೆ ಅಧ್ಯಯನ ನಡೆಸಿದ ನಂತರ ನಾವು ಈ ಆಪ್ ಅನ್ನು ವಿನ್ಯಾಸಗೊಳಿಸಿದ್ದೇವೆ. ಇದಲ್ಲದೇ ನಾವು ಐಸಿಎಸ್‌ಇ ಮತ್ತು ಸಿಬಿಎಸ್‌ಇ ಮಂಡಳಿಯ ಪಠ್ಯಗಳಿಗೆ ಅನುಗುಣವಾಗಿ ನಾವು ಆಪ್ ಅನ್ನು ಅಭಿವೃದ್ಧಿಪಡಿಸಿದ್ದೇವೆ ಎಂದು ತಿಳಿಸಿದರು.

## ಸೌಥ್ ಏಷ್ಯಾ ಅವಾರ್ಡ್ಸ್ 2021ಗೆ ಆಹ್ವಾನಿಸಿದ ಪಿಎಂಐ

**ಬೆಂಗಳೂರು:** ಪ್ರಾಜೆಕ್ಟ್ ವೃತ್ತಿಪರರು ಮತ್ತು ಬದಲಾವಣೆಯ ಹರಿಕಾರರಿಗೆ ವಿಶ್ವದಲ್ಲೇ ಪ್ರಮುಖ ವೃತ್ತಿಪರ ಸಂಘಟನೆಯಾದ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ (ಪಿಎಂಐ) ತನ್ನ ಪಿಎಂಐ ಸೌಥ್ ಏಷ್ಯಾ ಅವಾರ್ಡ್ಸ್ 2021ಕ್ಕಾಗಿ ಭಾರತ, ಬಾಂಗ್ಲಾದೇಶ ಮತ್ತು ಶ್ರೀಲಂಕಾದಿಂದ ನಾಮಿನೇಶನ್‌ಗಳನ್ನು ಆಹ್ವಾನಿಸಿದೆ.

ಸ್ಫೂರ್ತಿದಾಯಕ ಪ್ರಾಜೆಕ್ಟ್‌ಗಳ ಮೂಲಕ ಈ ವಲಯವನ್ನು ರೂಪಾಂತರಗೊಳಿಸುವ ಪ್ರಾಜೆಕ್ಟ್ ತಂಡಗಳು ಮತ್ತು ಸಂಸ್ಥೆಗಳನ್ನು ಮನ್ನಿಸಲು 2009ರಲ್ಲಿ ಈ ಪುರಸ್ಕಾರ ಯೋಜನೆಯನ್ನು ಆರಂಭಿಸಲಾಗಿದ್ದು, ಇದನ್ನು ಸರ್ಕಾರಗಳು, ಎನ್‌ಜಿಒಗಳು ಮತ್ತು ಪ್ರಾಜೆಕ್ಟ್ ವೃತ್ತಿಪರರು ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ ಎಂದು ಪರಿಗಣಿಸಿವೆ. ಅತ್ಯಂತ ಅನಿಶ್ಚಿತತೆ ಮತ್ತು ವ್ಯತ್ಯಯದ ಸಮಯದಲ್ಲಿ, ಬದಲಾವಣೆಯನ್ನು ಯಶಸ್ವಿಯಾಗಿ ಉತ್ತೇಜಿಸುವ ಮತ್ತು ಕಲ್ಪನೆಯನ್ನು ವಾಸ್ತವಕ್ಕೆ ಇಳಿಸುವ ಪ್ರತಿಭೆಯನ್ನು ಸಂಸ್ಥೆಗಳು ಅವಲಂಬಿಸುತ್ತವೆ ಎಂದು ಪಿಎಂಐ ಸೌಥ್ ಏಷ್ಯಾದ ವ್ಯವಸ್ಥಾಪಕ ನಿರ್ದೇಶಕ ಡಾ. ಶ್ರೀನಿ ಶ್ರೀನಿವಾಸನ್ ಹೇಳಿದ್ದಾರೆ. "ದಕ್ಷಿಣ ಏಷ್ಯಾ ವಲಯದಲ್ಲಿ ಕಳೆದ ವರ್ಷಗಳ ನಾಮಿನಿಗಳ ಅಪೂರ್ವ ಸಾಧನೆಗಳು ಮತ್ತು ಉದ್ಯಮ ಮತ್ತು ಸಮಾಜಕ್ಕೆ ಮೌಲ್ಯ ಒದಗಿಸುವಲ್ಲಿ ಅವರ ಬದ್ಧತೆಯನ್ನು ನಾನು ಮೆಚ್ಚಿದ್ದೇನೆ. ಈ ವರ್ಷದಲ್ಲಿ ಅಪಾರ ವೈಪರೀತ್ಯ ಉಂಟಾಗಿದ್ದು, ಈ ವರ್ಷದ ನಾಮಿನೇಶನ್‌ಗಳು ಅತ್ಯಂತ ವಿಶಿಷ್ಟವಾಗಿರುತ್ತವೆ ಎಂದು ನಾನು ಭಾವಿಸಿದ್ದೇನೆ.

## ಹೊಸ ಅನ್ವೇಷಣೆ: ಸುಪ್ರಿಮ್ ಸೂಪರ್ ಮಹಿಳೆ ಅಭಿಯಾನ

**ಬೆಂಗಳೂರು:** ದಕ್ಷಿಣ ಭಾರತದಲ್ಲಿ ಪ್ರಖ್ಯಾತಿ ಪಡೆದಿರುವ ಅಡುಗೆ ಎಣ್ಣೆ ತಯಾರಿಕಾ ಕಂಪನಿ ಸುಪ್ರಿಮ್

ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಮಹಿಳೆಯರಿಗೆ ಸೂಪರ್ ಹೀರೋ ಎಂಬ ಶೀರ್ಷಿಕೆಯಡಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಡಲಾಗುತ್ತಿದೆ. ಸನ್ ಪ್ಯೂರ್ ಸೂಪರ್ ಮಹಿಳೆ ಎಂಬ ಶೀರ್ಷಿಕೆಯಡಿ ಆಯಿಲ್ ಉತ್ಪನ್ನ ಹೊರ ವಿನ್ಯಾಸವು ಪಿಂಕ್ ಮತ್ತು ಪರ್ಪಲ್ ಬಣ್ಣವಾಗಿ ಬದಲಾಯಿಸಲಾಗುತ್ತಿದೆ. ಮಹಿಳೆಯಲ್ಲಿ ಸ್ಫೂರ್ತಿ ತುಂಬಲು ಕರ್ನಾಟಕದ ಎಲ್ಲಾ ಮಾರುಕಟ್ಟೆಯಲ್ಲೂ ಇಂತಹ ನೂತನ ಉತ್ಪನ್ನ ಲಭ್ಯವಿರಲಿದೆ.

ಆಯಿಲ್ ಉತ್ಪನ್ನದ ಮೇಲ್ಮೈ ವಿನ್ಯಾಸ ಬದಲಾವಣೆ ಕುರಿತು ಮಾತನಾಡಿದ ಕಂಪನಿಯ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಮನ್ನಣ್ ಖಾನ್ ಅವರು, ಗ್ರಾಹಕರ ಆಯ್ಕೆ ಅಭಿರುಚಿಗೆ ಅನುಗುಣವಾಗಿ ನಮ್ಮ ಆಯಿಲ್ ಕಂಪನಿ ಅಡುಗೆ ಎಣ್ಣೆ ತಯಾರಿಸುತ್ತಿದೆ. ಸನ್ ಪ್ಯೂರ್ ವಿಶೇಷ ರಿಯಾಯಿತಿಗಳಲ್ಲಿ ಉತ್ಪನ್ನಗಳನ್ನು ಗ್ರಾಹಕರನ್ನು ತಲುಪುತ್ತಿದೆ. ದಕ್ಷಿಣ ಭಾರತದಲ್ಲಿ ಸತತವಾಗಿ ಮೂರು ದಶಕಗಳಿಂದ ಉತ್ಪನ್ನದಲ್ಲಿ ಶ್ರೇಷ್ಠತೆ ಕಾಪಾಡಿಕೊಂಡು ಬರುತ್ತಿದೆ ಎಂದು ಅಭಿಪ್ರಾಯವನ್ನು ತಿಳಿಸಿದ್ದಾರೆ.

# ಬೆಮೆಲ್ ಕಾರ್ಮಿಕರ ಹೋರಾಟ ಬೆಂಬಲಿಸಿದ ಐಎನ್‌ಟಿಯುಸಿ

### ಖಾಸಗೀಕರಣಗೊಳಿಸದಂತೆ ಒತ್ತಾಯಿಸಿ ಒಂದು ಲಕ್ಷ ಕಾರ್ಮಿಕರೊಂದಿಗೆ ವಿಧಾನಸೌಧ ಮುತ್ತಿಗೆ: ಐಎನ್‌ಟಿಯುಸಿ ಮುಖಂಡ ಪ್ರಕಾಶಂ

**ಕೆಜಿಎಫ್:** ಬಿಇಎಂಎಲ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸದಿರುವಂತೆ ಒತ್ತಾಯಿಸಿ ಬೆಮೆಲ್ ಕಾರ್ಖಾನೆ ಮುಂಭಾಗದಲ್ಲಿ ನಡೆಸಲಾಗುತ್ತಿರುವ 1 ತಿಂಗಳ ನಿರಂತರ ಹೋರಾಟವನ್ನು ಬೆಂಬಲಿಸಿ ರಾಜ್ಯ ಐಎನ್‌ಟಿಯುಸಿ ಮುಖಂಡ ಪ್ರಕಾಶಂ ಸಾಥ್ ನೀಡಿದರು.

ಈ ವೇಳೆ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಪ್ರಕಾಶಂ, ಹಿಂದಿನ ಪ್ರಧಾನ ಮಂತ್ರಿಗಳು ಕೈಗಾರಿಕೆ ಸಚಿವರು ದೇಶದಲ್ಲಿ ಸರ್ಕಾರಿ ಸೌಮ್ಯದ ಉದ್ದಿಮೆಗಳನ್ನು ಸ್ಥಾಪನೆ ಮಾಡಿ ಕಾರ್ಮಿಕ ವಲಯ ಆರ್ಥಿಕವಾಗಿ ಚೇತರಿಕೆ ಕಂಡು ಬರಲು

ಸಹಕಾರ ನೀಡಿದ್ದರು ಆದರೆ ಇಂದು ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರಮೋದಿ ಕೈಗಾರಿಕೆ ಸಚಿವರು ಸರ್ಕಾರಿ ಸೌಮ್ಯದ ಉದ್ದಿಮೆಗಳನ್ನು ಮಾರಾಟ ಮಾಡುವ ಹುನ್ನಾರವನ್ನು ಮಾಡುತ್ತಿದ್ದಾರೆ. ಈಗಾಗಲೇ ರೈಲ್ವೆ ವಿಮಾನ ಸಾರಿಗೆ ಸೇರಿದಂತೆ ಇತರೆ ಕಾರ್ಖಾನೆಗಳನ್ನು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಿದ್ದಾರೆ ಇದೀಗ ಲಾಭದಾಯಕವಾಗಿ ಮುನ್ನೆಡೆಯುತ್ತಿರುವ ಬಿಇಎಂಎಲ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಲು ಮುಂದಾಗಿದ್ದಾರೆ. ಪ್ರಾಣ ಬಿಟ್ಟೇವು ಆದರೆ ಬೆಮೆಲ್ ಖಾಸಗೀಕರಣಗೊಳಿಸಲು ಬಿಡುವುದಿಲ್ಲ, ಖಾಸಗೀಕರಣ ಹಿಂಪಡೆಯುವಂತೆ ಆಗ್ರಹಿಸಿ ದೆಹಲಿಯಲ್ಲೂ ಹೋರಾಟವನ್ನು ಮಾಡಲಾಗುವುದು ಮತ್ತು ಶಾಸಕರು ಸಂಸದರಿಗೆ ಸಂಸತ್‌ನಲ್ಲಿ ಧ್ವನಿ ಎತ್ತುವಂತೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿಪಿಎಂ ಪಕ್ಷದ ಮುಖಂಡ ನಗರಸಭೆ ಸದಸ್ಯ ತಂಗರಾಜ್, ಕಿಶೋರಕುಮಾರ, ವೆಂಕಟರಮರೆಡ್ಡಿ, ಬೆಮೆಲ್ ಕಾರ್ಮಿಕ ಸಂಘದ ಅಧ್ಯಕ್ಷ ಅಂಜನೇಯರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದುಲೈ ಮುತ್ತು, ದಾಯಲ್, ಪಾರ್ಥಿಬಾನ್ ಹಾಗೂ ಇತರರು ಹಾಜರಿದ್ದರು.

## ಶಿರಾದಲ್ಲಿ ಭಕ್ತಿಪೂರ್ವಕ ಮಹಾಶಿವರಾತ್ರಿ ಆಚರಣೆ

**ಶಿರಾ:** ಶಿವರಾತ್ರಿ ಹಬ್ಬವನ್ನು ಶಿರಾ ನಗರ ಸೇರಿದಂತೆ ತಾಲೂಕಿನಾದ್ಯಂತ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

ಶಿರಾ ನಗರದ ಸಂತೇಪೇಟೆಯಲ್ಲಿರುವ ಶ್ರೀ ಕೊಳದಪ್ಪಲೇಶ್ವರ ದೇವಸ್ಥಾನ, ಕೋಟೆ ಕೆರೆ ಹಿಂಭಾಗದಲ್ಲಿರುವ ಶ್ರೀ ಪಲ್ಲೇಶ್ವರ ದೇವಸ್ಥಾನ, ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ದುರ್ಗಮ್ಮ ದೇವಸ್ಥಾನ, ಜ್ಯೋತಿನಗರದ ಬೇಸ್ಕಾಂ ಕಚೇರಿ ಆವರಣದಲ್ಲಿರುವ ಶ್ರೀರಾಮನ ದೇವಸ್ಥಾನ, ಬನ್ನಿನಗರದ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಸ್ಥಾನ,

ಸಾಕ್ಷಿ ಆಂಜನೇಯ ಸ್ವಾಮಿ ದೇವಸ್ಥಾನ, ನಗರಕ್ಕೆ ಹೊರವಲಯದ ಬಯಲು ಆಂಜನೇಯ ಸ್ವಾಮಿ ದೇವಸ್ಥಾನ, ರಂಗನಾಥ ನಗರದ ಶ್ರೀ ಕಂಬದರಂಗನಾಥ ಸ್ವಾಮಿ ದೇವಸ್ಥಾನ ಸೇರಿದಂತೆ ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ಶಿವರಾತ್ರಿ ಹಬ್ಬದ ಪ್ರಯುಕ್ತ ವಿಶೇಷ ಪೂಜೆಗಳು ನಡೆದವು.

ಶಾಸಕ ಡಾ.ಸಿ.ಎಂ.ರಾಜೇಶ್ ಗೌಡ ಅವರು ನಗರದ ಈಶ್ವರ ದೇವಸ್ಥಾನ, ತಾಲೂಕಿನ ಕೊಡಿ ಮಲ್ಲೇಶ್ವರ ದೇವಸ್ಥಾನ ಸೇರಿದಂತೆ ಹಲವು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಶಿವರಾತ್ರಿ ಹಬ್ಬದ ಪ್ರಯುಕ್ತ ನಗರ ಬಿಜೆಪಿ ಎಸ್‌ಟಿ ಮೋರ್ಚಾ ವತಿಯಿಂದ ಮಹಾನಂದಿ ಗೋಶಾಲೆಯಲ್ಲಿ ಗೋವುಗಳಿಗೆ ಸ್ನಾನ ಮಾಡಿಸುವ ಮೂಲಕ ಗೋಶಾಲೆ ಸ್ವಚ್ಛತೆ ಮಾಡಲಾಯಿತು. ಈ ಸಂದರ್ಭದಲ್ಲಿ ಎಸ್‌ಟಿ ಮೋರ್ಚಾದ ರಕ್ಷಿತ್, ಮಧು, ನರೇಂದ್ರ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಎಸ್‌ಐ ಮೇಲೆ ದಾಳಿ ಮಾಡಿದ ಆರೋಪಿ ಅಪೇನ್ ಬಂಧನ

**ಕೆಜಿಎಫ್:** ಎಸ್‌ಐ ಮೇಲೆ ದಾಳಿ ಮಾಡಿ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಆರೋಪಿ ಅಪೇನ್‌ನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಕೆಜಿಎಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಲಾಕಿಯಾ ಕರುಣಕರನ್ ತಿಳಿಸಿದರು.

ಕೆಜಿಎಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಮಹದೇವಪುರ ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕಳವು ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸುವ ಸಲುವಾಗಿ ಆಂಧ್ರಸನ್‌ಪೇಟೆ ಠಾಣೆ ವ್ಯಾಪ್ತಿಯ ಲೂರ್ದನಗರಕ್ಕೆ ರಾತ್ರಿ 12 ಗಂಟೆ ಸಮಯದಲ್ಲಿ ಆಗಮಿಸಿ ಮನೆಯಲ್ಲಿ ಇದ್ದ ಆರೋಪಿಯನ್ನು ಬಂಧಿಸುವ ಸಂದರ್ಭದಲ್ಲಿ ಆರೋಪಿ ಅಪೇನ್ ಎಸ್‌ಐ ಹರಿನಾಥಬಾಬುವಿನ ಮೇಲೆ ದಾಳಿ ಮಾಡಿ ಕೈಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಮತ್ತು ಎಸ್‌ಐ ಸಹ ಆರೋಪಿಗೆ ಶೂಟ್ ಮಾಡಿದ್ದರು ನಂತರ ಎಸ್‌ಐ ಹರಿನಾಥಬಾಬು ರನ್ನು ಕೆಜಿಎಫ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಬೆಂಗಳೂರು ನಗರದ ಹಾಸ್ಮೇಟ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ದಾಖಲು ಮಾಡಲಾಗಿತ್ತು.

ಆರೋಪಿಯ ಬಂಧನಕ್ಕೆ ವಿಶೇಷ ಪೊಲೀಸ್ ತಂಡವನ್ನು ರಚಿಸಿ ಹೊರ ರಾಜ್ಯಗಳಲ್ಲೂ ಹುಡುಕಾಟ ನಡೆಸಲಾಗಿತ್ತು ಕಡೆಗೆ ಲೂರ್ದನಗರದ ಮನೆಯಲ್ಲಿ ಅವಿತುಕೊಂಡಿರುವುದಾಗಿ ಬಂದ ಖಚಿತ ಮಾಹಿತಿ ಮೇರೆಗೆ ಆರೋಪಿಯನ್ನು ಬಂಧಸಲಾಗಿದೆ ಎಂದು ತಿಳಿಸಿದರು.

**ರೌಡಿಗಳ ಪೇರೆಡ್ :**

ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿರುವ ರೌಡಿಗಳಿಗೆ ಎಚ್ಚರಿಕೆ ನೀಡುವಲ್ಲಿ ಮುಂದಿನ ದಿನಗಳಲ್ಲಿ ಪೇರೆಡ್ ಮಾಡಿಸಲಾಗುವುದು ಮತ್ತು ಹಲವು ವರ್ಷಗಳಿಂದ ರೌಡಿ ಚಟುವಟಿಕೆಗಳಲ್ಲಿ ಭಾಗಿಯಾಗದಿದ್ದರೆ ಅಂತಹವರ ವಿರುದ್ಧ ದಾಖಲಾಗಿರುವ ರೌಡಿ ಲೀಸ್ಟ್‌ನಿಂದ ತೆಗೆಯಲಾಗುವುದು ಎಂದರು.

ಶಾಲಾ ಕಾಲೇಜುಗಳ ಬಳಿ ನಿತ್ಯ ಬೀಟ್ ಪೊಲೀಸರ ರೌಂಡ್ಸ್ ಮಾಡಲು ಆದೇಶ ನೀಡಲಾಗುವುದು ಮತ್ತು ಅಫರಾದ ಚಟುವಟಿಕೆಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣವಾದ ಕ್ರಮವನ್ನು ನಿರ್ದಾಕ್ಷಿಣ್ಯವಾಗಿ ಕೈಗೊಳ್ಳಲಾಗುವುದು ಹಾಗೂ ಸಾರ್ವಜನಿಕರೊಂದಿಗೆ ಉತ್ತಮ ಸಂಬಂಧವನ್ನು ಹೊಂದಲು ಎಲ್ಲಾ ಠಾಣೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಸಾರ್ವಜನಿಕರು ಸಹ ತಮ್ಮ ಗಮನಕ್ಕೆ ಬರುವ ಅಫರಾದ ಚಟುವಟಿಕೆಗಳನ್ನು ನನ್ನ ಗಮನಕ್ಕೆ ತಂದರೆ ತಕ್ಷಣ ಸೂಕ್ತವಾದ ಕ್ರಮ ವಹಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಡಿವೈಎಸ್‌ಪಿ ಉಮೇಶ್ ಹಾಜರಿದ್ದರು.

## ಮಾಲೂರು ತಾಲೂಕಿನಾದ್ಯಂತ ಎಲ್ಲೆಡೆ ಶಿವನಾಮ ಸ್ಮರಣೆ

**ಮಾಲೂರು:** ಮಹಾಶಿವರಾತ್ರಿ ಅಂಗವಾಗಿ ಮುಜರಾಯಿ ಇಲಾಖೆಗೆ ಸೇರಿದ ಪಟ್ಟಣದ ಶಂಕರನಾರಾಯಣಸ್ವಾಮಿ ದೇಗುಲ ಸೇರಿದಂತೆ ತಾಲೂಕಿನಾದ್ಯಂತ ವಿವಿಧ ಗ್ರಾಮಗಳಲ್ಲಿ ದೇವಾಲಯಗಳಲ್ಲಿ ದೇವರಿಗೆ ವಿಶೇಷ ಹೂವಿನ ಅಲಂಕಾರ, ಪೂಜಾ ಕೈಂಕರ್ಯಗಳು ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಶಂಕರನಾರಾಯಣಸ್ವಾಮಿ ದೇವಾಲಯದಲ್ಲೂ ಸಹ ಶಿವರಾತ್ರಿ ಅಂಗವಾಗಿ ದೇವರಿಗೆ ವಿಜೃಂಭಣೆಯಿಂದ ಪೂಜೆಗಳು ನಡೆಯಿತು. ಮೂಲದೇವರಿಗೆ ವಿವಿಧ ರೀತಿಯ ಹೂವಿನ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಭಕ್ತಾಧಿಗಳು ಶಿವನ ನಾಮಸ್ಮರಣೆ ಮೂಲಕ ದೇವರ ದರ್ಶನ ಪಡೆದರು. ಭಕ್ತಾಧಿಗಳಿಗೆ ತೀರ್ಥ ಪ್ರಸಾದ ವಿತರಿಸಲಾಯಿತು.

ಮಹಾಶಿವರಾತ್ರಿ ಅಂಗವಾಗಿ ತಾಲೂ

ಕಿನ ವಿವಿಧ ಗ್ರಾಮಗಳಲ್ಲಿ ಭಕ್ತಾಧಿಗಳು ಉಪವಾಸ ವ್ರತ ಕೈಗೊಂಡು ಶಿವನ ಜಪ ಮಾಡುತ್ತಾ ದೇಗುಲಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಪಟ್ಟಣದ ಶಂಕರನಾರಾಯಣಸ್ವಾಮಿ, ಗಾಂಧಿ ವೃತ್ತದ ಶ್ರೀ ಶಿರಡಿ ಸಾಯಿ ಬಾಬಾ ಮಂದಿರ, ಶ್ರೀ ಮಾರಿಕಾಂಭ ದೇವಾಲಯ, ಸುಬ್ರಮಣಿಸ್ವಾಮಿ ದೇವಾಲಯ, ಕಾಡುಮಲ್ಲೇಶ್ವರ, ಟೇಕಲ್‌ನ ಪ್ರಸನ್ನ ಸೋಮೇಶ್ವರಸ್ವಾಮಿ, ಮಾಸ್ತಿಯ ಪ್ರಸಿದ್ಧ ದೇಗುಲವಾದ ತೀರ್ಥಬಂಡಹಟ್ಟಿಯ ತೀರ್ಥಗಿರಿನಾಥೇಶ್ವರ, ಮಾಸ್ತಿ